


International Journal of Kannada Research
www.kannadajournal.com

ISSN: 2454–5813
IJKR 2024; 10(4): 18-21
© 2024 IJKR
www.kannadajournal.com
Received: 25-07-2024
Accepted: 30-08-2024

**ಅರವಿಂದ ಇ**
ಸಂಶೋಧನಾ ವಿದ್ಯಾರ್ಥಿ, ಡಾ. ಡಿ ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, ಕರ್ನಾಟಕ, ಭಾರತ

**ಪ್ರೊ. ಅಣ್ಣಮ್ಮ**
ಪ್ರಾಧ್ಯಾಪಕರು, ಡಾ. ಡಿ ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, ಕರ್ನಾಟಕ, ಭಾರತ

**Corresponding Author:**
**ಅರವಿಂದ ಇ**
ಸಂಶೋಧನಾ ವಿದ್ಯಾರ್ಥಿ, ಡಾ. ಡಿ ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, ಕರ್ನಾಟಕ, ಭಾರತ

# ಸಿದ್ಧರಾಮನ ವಚನಗಳಲ್ಲಿ ಸ್ತ್ರೀಯರು

**ಅರವಿಂದ ಇ, ಪ್ರೊ. ಅಣ್ಣಮ್ಮ**

**DOI:** https://doi.org/10.22271/24545813.2024.v10.i4a.1048

**ಪೀಠಿಕೆ**

ಚರಿತ್ರೆಯಲ್ಲಿ ಮಹಿಳೆ ಬಗ್ಗೆ ತೋರ್ಪಡಿಸಿದ ಮನೋಭಾವವು ಎಲ್ಲ ಕಾಲದಲ್ಲಿಯೂ ಒಂದೇ ರೀತಿಯದಾಗಿರಲಿಲ್ಲ. ಕಾಲಕಾಲಕ್ಕೆ ಮಹಿಳೆಯರ ಬಗ್ಗೆ ತನ್ನ ಮನೋಭಾವವನ್ನು ಮಾರ್ಪಡಿಸಿಕೊಂಡು, ಕೀಳು ಸ್ಥಾನಮಾನವನ್ನು ವೈದಿಕ ನೈತಿಕ ಕಟ್ಟುಪಾಡುಗಳು ನೀಡಿದ್ದವು. ಇಪ್ಪತ್ತನೆಯ ಶತಮಾನಕ್ಕೆ ಹಿಂದಿನ ಭಾರತದಲ್ಲಿ ಸಮಾಜವು ಸ್ತ್ರೀಯ ಮೇಲೆ ಹೆಚ್ಚು ಹೆಚ್ಚಾಗಿ ನಿರ್ಬಂಧಗಳನ್ನು ಹೇರುತ್ತ ಬಂದಿದೆ. "ಭಾರತದ ಸಾಮಾಜಿಕ ಇತಿಹಾಸದಲ್ಲಿ ಸ್ತ್ರೀಯರ ಮೇಲೆ ವಿಪರೀತ ನಿರ್ಬಂಧವನ್ನು ಹೇರಿ ಅವಳು ಸ್ವಾತಂತ್ರ್ಯಕ್ಕೆ ಸ್ವಲ್ಪವಾದರೂ ಅರ್ಹಳಲ್ಲ ಎಂದು ಸಾರಿದ ಕಾಲವೆಂದರೆ ಸ್ಮೃತಿಗಳ ಯುಗ. ಧರ್ಮಸೂತ್ರಗಳಲ್ಲಿ ಸ್ತ್ರೀಯರ ಬಗ್ಗೆ ತೋರಿಸುವ ಮನೋಭಾವವು ವಿಚಿತ್ರವಾದುದು. ಒಂದು ಕಡೆ ಅವಳನ್ನು ಪೂಜ್ಯ ವ್ಯಕ್ತಿಯೆಂದು ಪರಿಗಣಿಸಿದ್ದರೆ, ಮತ್ತೊಂದೆಡೆ ಮನೆಯಲ್ಲಿನ ಇತರ ಯಾವುದೇ ವೈಯಕ್ತಿಕ ಆಸ್ತಿಗಿಂತ ಹೆಚ್ಚಿನ ಸ್ಥಾನವನ್ನು ಆಕೆಯು ಪಡೆದಿರಲಿಲ್ಲ. ಗೌತಮ ಧರ್ಮಸೂತ್ರವು 'ಅಸ್ವತಂತ್ರಾ ಧರ್ಮೇ ಸ್ತ್ರೀ' ಎಂದೇ ಘೋಷಿಸಿತು. ಬೌಧಾಯನ ವಾಸಿಷ್ಠ ಧರ್ಮಸೂತ್ರಗಳು ಸ್ತ್ರೀಯನ್ನು ಒಂದು ಬಗೆಯ ಆಸ್ತಿಯಂತೆ ಪರಿಗಣಿಸಿದವು. ಮನುವಿನ ಮನೋಭಾವವು ಇಂತಹುದೇ ರೀತಿಯದು; ಸ್ತ್ರೀಯು ಪರಿಪೂರ್ಣಳಾದವಳಾದರೂ ಪುರುಷನ ಪೂಜ್ಯತೆಗೆ ಅರ್ಹಳಾದವಳೂ ಆಗಿರುವಳೆಂದು ಒಂದು ಕಡೆಯಲ್ಲಿ ಪರಿಗಣಿಸಿದರೆ, ಮತ್ತೊಂದೆಡೆ ಅವಳನ್ನು ಪಾಪದ ಮೂಲವೆಂದೂ ಸ್ವಾತಂತ್ರ್ಯಕ್ಕೆ ಅನರ್ಹಳೆಂದೂ ಭಾವಿಸುತ್ತಾನೆ. 'ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ರಕ್ಷಂತಿ ಸ್ಥವಿರೇ ಪುತ್ರಾ ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನುವಿನ ಶ್ಲೋಕವು ತುಂಬ ಪ್ರಸಿದ್ಧವಾದದ್ದು."[1]

ವಚನಕಾರರ ಕಾಲವಾದ ಹನ್ನೆರಡನೆಯ ಶತಮಾನದಲ್ಲಿಯೂ ಸಮಾಜವು ಸ್ತ್ರೀಯರ ಬಗ್ಗೆ ಹೆಚ್ಚಿನ ಗೌರವವನ್ನೇನೂ ತೋರಿಸಲಿಲ್ಲ. "ವಚನಕಾರರು ಕಾರ್ಯಪ್ರವೃತ್ತರಾಗುವ ಮುಂಚೆ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ದಿಗಂಬರ ಜೈನಧರ್ಮಶಾಖೆಯು ಎಂತಹ ಹೆಣ್ಣಿಗೂ ಮೋಕ್ಷವಿಲ್ಲವೆಂದು ನಂಬಿದ್ದಿತು. ಬೌದ್ಧಿಕವಾಗಿ ಹೆಣ್ಣು ಗಂಡಿಗಿಂತ ಹೆಚ್ಚು ಶ್ರೇಷ್ಠಳೆನಿಸಿಕೊಂಡಿದ್ದರೂ ಅವಳಿಗೆ ಮೋಕ್ಷವಿಲ್ಲವೆಂಬ ನಂಬಿಕೆಯನ್ನು ಸೋಮದೇವನೂ ಸಮರ್ಥಿಸುತ್ತಾನೆ. ನಯಸೇನನಂತೂ 'ಎನಿಸುಜ್ವಳಮಾದೊಡೆ ಚಂದ್ರನ ತೇಜಂ ರವಿಯ ತೇಜಮಂ ಗೆಲ್ಗುಮೆ ಪೆಣ್ಣೆನಿತೊಳ್ಳಿದಳಾದೊಡೆ ಪುರುಷನೊಳಾದ ಮಹಾಗುಣಂಗಳಂ ಪೋಲ್ತಪಳೆ' ಎಂದು ಪುರುಷ ಶ್ರೇಷ್ಠತೆಯನ್ನು ಸ್ಪಷ್ಟವಾದ ಮಾತುಗಳಲ್ಲಿ ಸಾರಿ ಹೇಳುತ್ತಾನೆ."[2] ವಚನಕಾರರು ಸ್ತ್ರೀಗೆ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸಮಾನತೆಯನ್ನು ತಂದುಕೊಟ್ಟು, ಅವಳಿಗೆ ಧೈರ್ಯ, ಆತ್ಮಗೌರವ, ಅಭಿವ್ಯಕ್ತಿಯ ಅವಕಾಶಗಳನ್ನೂ ಕಲ್ಪಿಸಿಕೊಟ್ಟರು. ಪರಂಪರಾಗತವಾಗಿ ಹೆಣ್ಣನ್ನು ಮಾಯೆ ಎಂದೋ ಆಧ್ಯಾತ್ಮ ಸಾಧನೆಗೆ ಆತಂಕವೆಂದೋ ಭಾವಿಸುತ್ತಿದ್ದ ಸಂದರ್ಭದಲ್ಲಿ, ಹೆಣ್ಣು ಮಾಯೆ ಅಲ್ಲ, ಮನದ ಮುಂದಣ ಆಸೆಯೆ ಮಾಯೆ ಎಂದದ್ದೂ, ಹೆಣ್ಣು ಗಂಡಿಗೆ ಕೌಟುಂಬಿಕ ಹಾಗೂ ಸಾಮಾಜಿಕ ಸಂಗಾತಿ ಮಾತ್ರವಲ್ಲ, ಆಧ್ಯಾತ್ಮಿಕ ಸಂಗಾತಿಯೂ ಹೌದು ಎಂಬಂತೆ ಹೆಣ್ಣನ್ನು ನಡೆಸಿಕೊಂಡದ್ದು ತುಂಬ ಮಹತ್ವದ ಸಂಗತಿಯಾಗಿದೆ.

[1] ಪಿ ವಿ ನಾರಾಯಣ, ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಪುಟ–91
[2] ಅದೇ, ಪುಟ–91

ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭುದೇವ, ಸಿದ್ಧರಾಮ ಮತ್ತು ಮಹಾದೇವಿಯಕ್ಕ ಇವರು ಪ್ರಮುಖರು. ಸಿದ್ಧರಾಮನು ಶಿವಯೋಗಿ, ಕರ್ಮಯೋಗಿಯೆಂದೇ ಪ್ರಸಿದ್ಧವಾಗಿದ್ದು, ಬಸವಣ್ಣ, ಅಲ್ಲಮ, ಚೆನ್ನಬಸವ ಇವರ ಪ್ರಭಾವಕ್ಕೆ ಸಿಲುಕಿದ್ದರೂ ಸಹ ಅವನು ಸ್ವತಂತ್ರ ವಿಚಾರವಾದಿಯಾಗಿದ್ದಾನೆ. ಯೋಗಿಯಾಗಿದ್ದಂತೆಯೇ ಹಲವು ಶಾಸ್ತ್ರ, ಧರ್ಮ, ದರ್ಶನ, ಕಾವ್ಯ ಮೊದಲಾದವುಗಳ ಪಾಂಡಿತ್ಯ ಸಿದ್ಧರಾಮನಿಗಿತ್ತು. ಹಾಗಾಗಿ ಸಿದ್ಧರಾಮನು ತನ್ನ ವಚನಗಳಲ್ಲಿ ಹೆಣ್ಣಿಗೆ ನೀಡಿರುವ ವಿಶೇಷ ಸ್ಥಾನಮಾನದ ಕುರಿತು ಚರ್ಚೆಯನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಜಾತಿ ಮತ್ತು ಲಿಂಗ ತಾರತಮ್ಯವನ್ನು ನಿವಾರಿಸುವುದು ಶರಣ ಚಳವಳಿಯ ಮುಖ್ಯ ಆಶಯವಾಗಿತ್ತು. ಅವರ ಈ ಪ್ರಣಾಳಿಕೆ ಬರಿಯ ಮಾತಾಗಿರಲಿಲ್ಲ, ಆಚರಣೆಯಲ್ಲಿ ಸಾಕಾರಗೊಂಡಿತ್ತು. ಸ್ತ್ರೀಯರ ಕುರಿತಾದ ಅಪಾರ ಗೌರವ ಶರಣರ ವಚನಗಳಲ್ಲಿ ಅಡಿಗಡಿಗೆ ವ್ಯಕ್ತವಾಗುತ್ತದೆ. ಈ ವಚನದಲ್ಲಿ ಸಿದ್ಧರಾಮನು ಹೆಣ್ಣನ್ನು ಸಾಕ್ಷಾತ್ ತನ್ನ ಇಷ್ಟದೈವವಾದ ಕಪಿಲಸಿದ್ಧ ಮಲ್ಲಿಕಾರ್ಜುನನ ಸಮನಾಗಿ ಭಾವಿಸಿ ಗೌರವಿಸಿದ್ದಾನೆ.

> "ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು.
> ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು.
> ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು.
> ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು.
> ಅದು ಕಾರಣ,
> ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ;
> ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ!"[3]

ಎನ್ನುವಾಗ ಹೆಣ್ಣನ್ನು ನಮ್ಮ ಪರಂಪರೆ ಪುರಾಣಗಳ ನೆಲೆಯಲ್ಲಿಯೇ ದೈವೀ ಸ್ವರೂಪದಲ್ಲಿ ಕಾಣಲಾಗಿದೆ. ಭಕ್ತಿಯಲ್ಲಿ ತೊಡಗಿದವರು, ಆಧ್ಯಾತ್ಮ ಸಾಧನೆಯಲ್ಲಿ ಮುಳುಗಿದವರು, ಹೆಣ್ಣನ್ನು ಅನುಮಾನದಿಂದ ಕಾಣುತ್ತಾ, ಹೆಣ್ಣಿನಿಂದ ತೊಂದರೆಯೇ ಹೆಚ್ಚೆಂದು ಭಾವಿಸುವುದು ತೀರ ಸಾಮಾನ್ಯವಾದ ದೃಷ್ಟಿಕೋನ. ಆದರೆ ಸಿದ್ಧರಾಮನು ಇಲ್ಲಿ ತ್ರಿಮೂರ್ತಿಗಳ ಪೌರಾಣಿಕ ಕಲ್ಪನೆಯನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುತ್ತಾ ಹೆಣ್ಣಿನ ಹಿರಿಮೆಯನ್ನು ಸಾರಿದ್ದಾನೆ. ಅವನ ದೃಷ್ಟಿಯಲ್ಲಿ, ಶಿವನ ತಲೆಯ ಮೇಲೇರಿ ಗಂಗೆಯಾಗಿ, ಪರಶಿವನ ಅರ್ಧಾಂಗಿಯಾಗಿ, ಬ್ರಹ್ಮನ ನಾಲಗೆಯಲ್ಲಿ ಸರಸ್ವತಿಯಾಗಿ, ನಾರಾಯಣನ ಎದೆಯಲ್ಲಿನ ಲಕ್ಷ್ಮಿಯಾಗಿರುವ ಹೆಣ್ಣು ಸಿದ್ಧರಾಮನ ದೃಷ್ಟಿಯಲ್ಲಿ ಪ್ರತ್ಯಕ್ಷ ಪರಮಾತ್ಮ ಆಗಿದ್ದಾಳೆ. ಇವರೆಲ್ಲರೂ ಪರಶಿವನಿಂದಲೇ ಆದವರಾದರೂ ಅವರು ತಂತಮ್ಮ ಪತಿಯರ ತಲೆ–ತೊಡೆ, ಎದೆ ಮತ್ತು ನಾಲಗೆಗಳಂತಹ ಪ್ರತಿಷ್ಠಿತ ಸ್ಥಾನಗಳನ್ನು ಗಳಿಸಿಕೊಂಡರು. ಹೀಗಾಗಿ, ಹೆಣ್ಣೆಂದರೆ ಕೇವಲವಲ್ಲ, ಅವಳು ರಾಕ್ಷಸಿಯೂ ಅರ್ಥಾತ್ ಮಾಯೆಯೂ ಅಲ್ಲ. ಅವಳು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬುದು ಸಿದ್ಧರಾಮನ ನಿಶ್ಚಿತ ಅಭಿಪ್ರಾಯವಾಗಿದೆ. ಇಲ್ಲಿ ಮತ್ತೆ ಮತ್ತೆ ಬಳಕೆಯಾಗಿರುವ 'ತಾ ಮಾಡಿದ ಹೆಣ್ಣು' ಎಂಬ ಶಬ್ದಗಳ ಸೃಷ್ಟಿಯಿರುವುದು ನಮ್ಮ ದೃಷ್ಟಿಯಲ್ಲಿ ರೂಪಿಸಿಕೊಂಡ ಮನಸ್ಸಿನ ಭಾವದಂತೆ ಹೆಣ್ಣು ರೂಪುಗೊಂಡಿದ್ದಾಳೆ. ಮನಸ್ಸೆಂಬ ಅಗಾಧ ಶಕ್ತಿಯ ಪರಿಚಯವೂ ಇಲ್ಲವಾಗಿದೆ.

"ಇಂಥದೊಂದು ವಚನ ನುಡಿಯುವ ಆಶಯ ಸ್ಪಷ್ಟವಾಗಿ ತಿಳಿಯುತ್ತದೆ. ಗಮನಿಸಬೇಕಾದ ಮಾತೆಂದರೆ ಇಂಥ ಆದರ್ಶದ ನುಡಿಗಳನ್ನು, ವ್ಯಾಖ್ಯಾನ, ವಾದಗಳನ್ನು ಮಂಡಿಸುವ ಅಗತ್ಯ ಬರುವುದೇ ಸಾಮಾಜಿಕ ಬದುಕಿನಲ್ಲಿ ಹೆಣ್ಣಿಗೆ ಗೌರವ, ಸಮಾನತೆಗಳು ದೊರೆಯದೆ ಇರುವಾಗ, ದೊರೆಯಬೇಕೆಂಬ ಹಂಬಲ ಹುಟ್ಟಿ ಬೆಳೆಯುತ್ತಿರುವಾಗ. ಇಂಥ ರಚನೆಗಳು ನಮ್ಮ ಮನಸ್ಸಿನಲ್ಲಿ ರೂಪಿಸಿಕೊಂಡಿರುವ ವಚನಯುಗದ ಆದರ್ಶಮಯ ಚಿತ್ರಣಕ್ಕೆ ಭಿತ್ತಿಯಾಗಿರುವ ಸುಡು ವಾಸ್ತವಗಳನ್ನು ಬಹಳ ಸೂಕ್ಷ್ಮವಾಗಿ ಹೇಳುತ್ತಿರುತ್ತವೆ. ಗಂಡನುಳ್ಳಮ್ಮನ ಗರತಿ ಎಂದು ತಿಳಿಯಬೇಕು ಅನ್ನುವಂಥ ಮಾತಾಗಲೀ, ವೇಶ್ಯೆಯನ್ನು ಹೀಗಳೆಯುವ ಮಾತುಗಳಾಗಲೀ ಗಂಡಿನ ಮೇಲ್ಮೆಯ ಭ್ರಮೆಯಿಂದ ಹುಟ್ಟಿದ ಯಜಮಾನಿಕೆಯನ್ನು ಕೂಡ ಸೂಚಿಸುತ್ತದೆ"[4] ಎಂದು ಓ.ಎಲ್.ನಾಗಭೂಷಣಸ್ವಾಮಿ ಅವರು ಅರ್ಥೈಸುತ್ತಾರೆ.

> "ಭಕ್ತನ ಮನ ಹೆಣ್ಣಿನೊಳಗಾದಡೆ ವಿವಾಹವಾಗಿ ಕೂಡುವುದು.
> ಭಕ್ತನ ಮನ ಮಣ್ಣಿನೊಳಗಾದಡೆ, ಕೊಂಡು ಆಲಯವ ಮಾಡುವುದು
> ಭಕ್ತನ ಮನ ಹೊನ್ನಿನೊಳಗಾದಡೆ, ಬಳಲಿ ದೊರಕಿಸುವುದು ನೋಡಾ,
> ಕಪಿಲಸಿದ್ಧಮಲ್ಲಿಕಾರ್ಜುನಾ."[5]

ಎನ್ನುವ ವಚನದಲ್ಲಿ ಮನಸ್ಸಿನ ಸಹಜ ಪ್ರವೃತ್ತಿಗಳನ್ನು ಧರ್ಮಬದ್ಧವಾಗಿ ಈಡೇರಿಸಿಕೊಂಡು, ಆ ಮೂಲಕವೇ ಅವುಗಳ ಮಿತಿಯನ್ನು ಮನಸ್ಸು ಅರಿಯುವಂತೆ ಮಾಡಬೇಕೆಂಬುದನ್ನು ಹೇಳುತ್ತಾನೆ. ಹೆಣ್ಣು, ಹೊನ್ನು, ಮಣ್ಣು ಪ್ರಪಂಚದ ಮೂರು ಆಕಾಂಕ್ಷೆಗಳು. ಮನಸ್ಸನ್ನು ನಿರಂತರವಾಗಿ ಕಾಡುವ ಈ ಆಕಾಂಕ್ಷೆಗಳು ಭೂತಾಕಾರವಾಗಿ ಸದಾ ನಮ್ಮೆದುರು ನಿಂತಿರುತ್ತವೆ. ಅವುಗಳನ್ನು ಬಲತ್ಕಾರದಿಂದಲ್ಲದೆ, ಧರ್ಮಬದ್ಧವಾಗಿ ಪಡೆಯಬೇಕೆಂಬ ನಿಲುವು ಇಲ್ಲಿದೆ. ಇತರರ ಬದುಕಿಗೆ ಹಾನಿ ಮಾಡದ ಆಕಾಂಕ್ಷೆಗಳ ಬಗೆಗೆ ಗೌರವವಿದೆ.

ಸಾಮಾಜಿಕ ಕಟ್ಟುಪಾಡಿನಲ್ಲಿ ವಿವಾಹವು ಗಂಡು–ಹೆಣ್ಣಿನ ಮೈತ್ರಿಗೆ ಪಾವಿತ್ರ್ಯದ ಬೆಸುಗೆ ಹಾಕುತ್ತದೆ. ಸಾಮಾಜಿಕ ಕಟ್ಟುಪಾಡಿಗೆ ನಿಲುಕದ ಗಂಡು–ಹೆಣ್ಣಿನ ಮೈತ್ರಿ ಅಪವಿತ್ರವಾದುದು. ಈ ಹಿನ್ನೆಲೆಯಲ್ಲಿ ಸಿದ್ಧರಾಮನು, 'ಭಕ್ತನ ಮನ ಹೆಣ್ಣಿನೊಳಗಾದಡೆ ವಿವಾಹವಾಗಿ ಕೂಡುವುದು' ಎನ್ನುವನು. 'ಭಕ್ತನ ಮನ ಮಣ್ಣಿನೊಳಗಾದಡೆ, ಕೊಂಡು ಆಲಯವ ಮಾಡು' ಎನ್ನುವುದು ಮಣ್ಣಿನ ಮೇಲೆ ಆಸೆಯಾದರೆ, ಅಂದರೆ ತನ್ನ ಮಡದಿ ಮಕ್ಕಳು ನಿಲ್ಲಲು ಒಂದು ನೆಲೆ ಬೇಕಾದಾಗ ಅನ್ಯರ ಪಾಲಿನ ಭೂಮಿಯ ಕಡೆಗೆ ಕಣ್ಣು ಹಾಯಿಸಬೇಕು. ಸ್ವಂತ ದುಡಿಮೆಯಿಂದ ಬಂದ ಸತ್ಯಶುದ್ಧವಾದ ದ್ರವ್ಯದಿಂದ ಕೊಂಡ ಭೂಮಿಗೆ ಬೆಲೆಯೇ ಹೊರತು ಅನ್ಯಾಯದಿಂದ ಬಂದುದಕ್ಕಲ್ಲ ಎಂಬ ಧ್ವನಿಯಿದೆ.

ಸಿದ್ಧರಾಮನು ಹೊನ್ನನ್ನು ತ್ಯಾಜ್ಯ ಎನ್ನುತ್ತಿಲ್ಲ. ಅದರ ಮೇಲೆ ಅತಿಯಾದ ಮೋಹವನ್ನು ತ್ಯಾಜ್ಯ ಎನ್ನುತ್ತಿದ್ದಾನೆ. ಹೊನ್ನು ಸುಖೀ ಬದುಕಿಗೆ ತೀರಾ ಗತ್ಯ. ಅದಿಲ್ಲದಿದ್ದರೆ ಸಂಸಾರದಲ್ಲಿ ಕಳೆಯಿಲ್ಲ. ಹೊನ್ನಿಗೆ ಎಲ್ಲವನ್ನೂ ಕೊಳ್ಳುವ ಶಕ್ತಿಯಿದೆ. ವಶಪಡಿಸಿಕೊಳ್ಳುವ ಗುಣವಿದೆ. ಅನ್ಯಾಯದ ಹಣ ಸುಖವನ್ನು ನೀಡುವುದಿಲ್ಲ, ದುಃಖವನ್ನು ನೀಡುತ್ತದೆ. ಹೊನ್ನನ್ನು ಗಳಿಸುವ ಭರದಲ್ಲಿ ಮಾನವ ದಾನವನಾಗುವುದನ್ನು, ದಯೆ, ಕರುಣೆ ಇಲ್ಲದವನಾಗುವುದನ್ನು ಸಿದ್ಧರಾಮ ಗಮನಿಸಿರುವನು. ಆ ಕಾರಣಕ್ಕಾಗಿಯೇ ಅವನು 'ಭಕ್ತನ

[3] ಮಲೆಯೂರು ಗುರುಸ್ವಾಮಿ, ಸಿದ್ಧರಾಮೇಶ್ವರ ವಚನಗಳು, ವಚನ–608

[4] ಓ.ಎಲ್.ನಾಗಭೂಷಣಸ್ವಾಮಿ, ವಚನ ಪ್ರಶ್ನೋತ್ತರ, ಪುಟ–50

[5] ಮಲೆಯೂರು ಗುರುಸ್ವಾಮಿ, ಸಿದ್ಧರಾಮೇಶ್ವರ ವಚನಗಳು, ವಚನ–826

ಮನ ಹೊನ್ನಿನೊಳಗಾದಡೆ ಬಳಲಿ ದೊರಕಿಸುವುದು' ಎಂದಿರುವನು.

ಹೆಣ್ಣನ್ನು ಮಾಯೆ ಎಂದೋ, ಆಧ್ಯಾತ್ಮ ಸಾಧನೆಗೆ ಆತಂಕವೆಂದೋ ಭಾವಿಸುತ್ತಿದ್ದ ವೈದಿಕ ಸಂಸ್ಕೃತಿಗಿಂತ ಭಿನ್ನವಾದದ್ದು ಶರಣ ಸಂಸ್ಕೃತಿ. ಹೆಣ್ಣು ಮಾಯೆ ಅಲ್ಲ, 'ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ' ಎಂದು ಅಲ್ಲಮಪ್ರಭು ಹೇಳುತ್ತಾನೆ. ಹೆಣ್ಣು ಗಂಡಿಗೆ ಮಾಯೆಯಾದರೆ, ಗಂಡು ಹೆಣ್ಣಿಗೆ ಮಾಯೆಯಾಗುವುದಿಲ್ಲವೇ ಎಂದು ಪ್ರಶ್ನಿಸುತ್ತಾರೆ ಶರಣೆಯರು. ಕಲ್ಯಾಣದ ಶರಣ ಚಳವಳಿಯಲ್ಲಿ ಹೆಣ್ಣು ಗಂಡಿಗೆ ಹಾಗೆಯೇ ಗಂಡು ಹೆಣ್ಣಿಗೆ ಕೌಟುಂಬಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸಂಗಾತಿಗಳಾಗಿರುವುದನ್ನು ವಚನಗಳು ಹೇಳುತ್ತವೆ.

"ಹೆಣ್ಣನ್ನು ವಸ್ತುವನ್ನಾಗಿ ನೋಡುವ ಕ್ರಮವಾಗಲಿ, ಹೆಣ್ಣನ್ನು ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಕಂಟಕಪ್ರಾಯ ಎನ್ನುವುದಾಗಲಿ, ಮೂಲತಃ ಪಿತೃಪ್ರಧಾನ ಸಂಸ್ಕೃತಿಯ ಸಾಂಪ್ರದಾಯಿಕ ದೃಷ್ಟಿಗಳೇ ಆಗಿವೆ. ಹೆಣ್ಣಿನ ಜೈವಿಕ ರೂಪಕ್ಕಷ್ಟೆ ಗಮನ ನೀಡಿ, 'ಭವಕ್ಕೆ ಬೀಜ' ಎಂಬ ಸಂಪ್ರದಾಯಿಕ ದೃಷ್ಟಿಯನ್ನು ವ್ಯಕ್ತಪಡಿಸಿದ ಸಿದ್ಧರಾಮ ಅದರಿಂದ ಬಿಡಿಸಿಕೊಂಡ ಬಗೆ ಅನನ್ಯ. ಸಿದ್ಧರಾಮನಿಗೆ ಅಂಗನೆಯರ ಅಂಗಾಂಗಗಳ ವ್ಯಾಮೋಹಕ್ಕೆ ಬಿದ್ದ ಭವಿಯ ಬಗ್ಗೆ ತಿರಸ್ಕಾರವಿದೆ. ಜೊತೆ ಶರಣನೊಬ್ಬ ಇಟ್ಟುಕೊಳ್ಳಬೇಕಾದ ಸೂಕ್ಷ್ಮ ಸಂಬಂಧದ ಅರಿವೂ ಇದೆ."[6]

"ಹೊನ್ನು ಬಿಡದನ್ನಕ್ಕ ಗುರುಪಾದೋದಕ ಸಲ್ಲದು.
ಮಣ್ಣು ಬಿಡದನ್ನಕ್ಕ ಲಿಂಗ ಪಾದೋದಕ ಸಲ್ಲದು.
ಹೆಣ್ಣು ಬಿಡದನ್ನಕ್ಕ ಜಂಗಮಪಾದೋದಕ ಸಲ್ಲದು.
ಈ ಸರ್ವವು ಅಳಿಯದನ್ನಕ್ಕ,
ಕಪಿಲಸಿದ್ಧಮಲ್ಲಿಕಾರ್ಜುನನಿಂಬುಗೊಡನು
ಮಹಾಬಯಲಲ್ಲಿ, ಕಲ್ಲಯ್ಯಾ."[7]

"ಹೆಣ್ಣಳಿದ ಬಳಿಕ ಮಣ್ಣಿನ ಹಂಗೇಕಯ್ಯಾ?
ಮಣ್ಣಳಿದ ಬಳಿಕ ಹೊನ್ನಿನ ಹಂಗೇಕಯ್ಯಾ?
ಮುಕ್ಕಣ್ಣನಾದ ಬಳಿಕ ಮೂರರ ಹಂಗು ಏನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ?"[8]

"ಹೆಣ್ಣ ಹಿಡಿದು ಹೆಣ್ಣ ಭೋಗಿಸಬಾರದು.
ಮಣ್ಣ ಹಿಡಿದು ಮಣ್ಣ ಭೋಗಿಸಬಾರದು.
ಹೊನ್ನ ಹಿಡಿದು ಹೊನ್ನ ಭೋಗಿಸಬಾರದು.
ಈ ಅಣಕದ ಭೇದವನಾರು ಅರಿಯರು
ಅದೆಂತು ಭಕ್ತಸ್ಥಲವಳವಡುವುದು?
ಕಪಿಲಸಿದ್ಧಮಲ್ಲಿಕಾರ್ಜುನಾ"[9]

ಶರಣಸ್ಥಲವನ್ನು ಪ್ರವೇಶಿಸಲು ಬೇಕಾದ ಸ್ಥಿತಿಯನ್ನು ವಚನ ವಿವರಿಸುತ್ತದೆ. ಈ ಅಣಕದ ಭೇದವನ್ನು ಯಾರು ಅರಿಯರು ಎಂಬುದು ಸಿದ್ಧರಾಮನ ಪ್ರಶ್ನೆ. ಯಾರು ಭಕ್ತರಾಗಬೇಕೆಂದು ಬಯಸಿದ್ದಾರೊ ಅವರು ಆಸ್ತಿ ಮತ್ತು ರತಿ ಸಂಬಂಧವನ್ನು ಸಾಮಾನ್ಯ ರೀತಿಯಲ್ಲಿ ನಿರ್ವಹಿಸಬೇಕು. ಈ ವಚನದ ಪ್ರಕಾರ ಉತ್ತಮ ಬದುಕಿನ ಮಾರ್ಗವನ್ನು ಅನುಭವದಿಂದಲೇ ಕಂಡುಕೊಳ್ಳಬೇಕು. ರೂಢಿಗತ ರತಿಸುಖ ಹಾಗೂ ಆಸ್ತಿ ವ್ಯಾಮೋಹಗಳನ್ನು ತ್ಯಜಿಸಬೇಕು. ಈ ಬಗೆಯ ತ್ಯಾಗ ಭಾವನೆಯು ಸ್ತ್ರೀಸಂಬಂಧ ಹಾಗೂ ಆಸ್ತಿ ಸಂಬಂಧಗಳ ಬಗ್ಗೆ ಹೊಸನೆಲೆಯಲ್ಲಿ ಒದಗಿಸುತ್ತದೆ. ಈ ಹೊಸ ನಡವಳಿಕೆಯನ್ನು ರೂಢಿಸಿಕೊಳ್ಳುವುದೇ ಶರಣಸ್ಥಲ ಪ್ರವೇಶಿಸಲು ಬೇಕಾದ ಸ್ಥಿತಿ ಎಂದು ಈ ವಚನ ತಿಳಿಸುತ್ತದೆ. ಸಿದ್ಧರಾಮನ ಪ್ರಕಾರ ಸಂಸಾರ ತ್ಯಾಗ ಮತ್ತು ಆಧ್ಯಾತ್ಮಿಕ ಬೆಳವಣಿಗೆಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಆಧ್ಯಾತ್ಮ ಸಾಧನೆಯ ಆರಂಭದ ಘಟ್ಟದಲ್ಲೇ ಸಂಸಾರ ತ್ಯಾಗ ಮಾಡಬೇಕಾಗಿರುವುದರಿಂದ ಮುಂದಿನ ಘಟ್ಟದಲ್ಲಿ ಕಟ್ಟುನಿಟ್ಟಾದ ಬ್ರಹ್ಮಚರ್ಯ ಪಾಲನೆ ಅತ್ಯಂತ ಸಹಜವಾದುದಾಗಿದೆ. ಆಧ್ಯಾತ್ಮಿಕ ಸಾಧಕನು ರತಿಸುಖವನ್ನು ಸಂಪೂರ್ಣವಾಗಿ ತ್ಯಜಿಸಬೇಕು ಎಂಬುದು ಸಿದ್ಧರಾಮನ ಸ್ಪಷ್ಟ ನಿಲುವಾಗಿದೆ.

"ಜ್ಞಾನಿಗಳು ತಾವಾದ ಬಳಿಕ ಅನ್ಯರ ಸ್ತೋತ್ರಕ್ಕೆ ಒಳಗಾಗಬಾರದು.
ಜ್ಞಾನಿಗಳು ತಾವಾದ ಬಳಿಕ ಗುರುಹಿರಿಯರಿಗಂಜಿ ನಡೆಯಬೇಕು.
ಜ್ಞಾನಿಗಳು ತಾವಾದ ಬಳಿಕ ಅನ್ಯಸ್ತ್ರೀ ತನ್ನ ಮಾತೆಯಂತಿರಬೇಕು.
ಕಪಿಲಸಿದ್ಧಮಲ್ಲಿಕಾರ್ಜುನ"[10]

ಈ ಬಗೆಯ ನಡವಳಿಕೆ ಮೂಲಕ ಹೊಸ ಮೌಲ್ಯವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ಸಿದ್ಧರಾಮ ಒತ್ತಿ ಹೇಳುತ್ತಿದ್ದಾನೆ. ಧಾರ್ಮಿಕ ತಿಳುವಳಿಕೆ ಪಡೆದು ಜ್ಞಾನಿಯಾದ ಮೇಲೆ ಆ ಜ್ಞಾನಕ್ಕೆ ಅನುಗುಣವಾಗಿ ನಡೆಯಬೇಕು. ಚಳವಳಿಯಲ್ಲಿನ ಹೊಸ ಅಧಿಕಾರಸ್ಥರಾದ ಗುರುವನ್ನು ಹಾಗೂ ಹಿರಿಯರನ್ನು ಗುರುತಿಸಬೇಕು. ಅವನು ಮಹಿಳೆಯರ ಬಗ್ಗೆ ಹೊಸ ದೃಷ್ಟಿಕೋನ ಬೆಳೆಸಿಕೊಳ್ಳಬೇಕು. ತನ್ನ ತಾಯಿಗೆ ತೋರಿಸುವಷ್ಟೇ ಗೌರವವನ್ನು ಇತರೆ ಸ್ತ್ರೀಯರಿಗೂ ತೋರಿಸಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಿದ್ದಾನೆ.

"ಸಿದ್ಧರಾಮನ ವಚನಗಳಲ್ಲಿ ಸ್ತ್ರೀಯನ್ನು ನೋಡುವ ದೃಷ್ಟಿ ಮೂರು ಬಗೆಯದಾಗಿದೆ. ಸಂಪ್ರದಾಯಿಕ ದೃಷ್ಟಿಕೋನ, ಸಹಜ ಸ್ವೀಕರಣದ ದೃಷ್ಟಿ ಹಾಗೂ ಸಂಪ್ರದಾಯದ ದೃಷ್ಟಿಯನ್ನು ಮುರಿದು ಕಟ್ಟಿದ ಆದರ್ಶಕರಣ. ಮೊದಲನೆಯದಾದ ಸಂಪ್ರದಾಯಿಕ ದೃಷ್ಟಿಕೋನದಲ್ಲಿ ಸಿದ್ಧರಾಮನ ವಚನಗಳಲ್ಲಿ ಹೆಣ್ಣನ್ನು ನಿರ್ಜೀವ ವಸ್ತುಗಳ ಜೊತೆ ಇಟ್ಟು ನೋಡಲಾಗಿದೆ. ಅಂದರೆ ಇಲ್ಲಿ ಹೆಣ್ಣು, ಹೊನ್ನು ಮತ್ತು ಮಣ್ಣಿನಂತೆ ಇರುವ ವಸ್ತುವಾಗಿದ್ದಾಳೆ, ಒಡವೆಯಾಗಿದ್ದಾಳೆ"[11] ಎಂದು ಕೆ.ಆರ್.ಸಿದ್ಧಗಂಗಮ್ಮ ಅವರು ಅಭಿಪ್ರಾಯಪಡುತ್ತಾರೆ.

"ಶರಣನಾದಡೆ ಸತಿಯ ಗೊಡ್ಡಾಟವೇಕಯ್ಯಾ?
ಇಂದ್ರಿಯಂಗಳು ಹರಿಯಲೇಕೆ?
ತಾನೆ ಸತಿ ಲಿಂಗವೇ ಪತಿಯಾದ ಬಳಿಕ?
ಸರ್ವ ಸಂಯೋಗಕ್ಕೆ ಲಿಂಗವೇ ಪತಿ, ತಾನೆ ಸತಿಯಾದಾತ
ಅನ್ಯ ಸತಿಯರಿಗೆರಗ; ಕರಣಂಗಳ ಹರಿಯಲೀಯದು,
ಕಾರ್ಪಣ್ಯಕ್ಕೊದಗ
ಕಪಿಲ ಸಿದ್ಧಮಲ್ಲಿಕಾರ್ಜುನಯ್ಯನ ಒಡಗೂಡಿದ ಶರಣ"[12]

[6] ಅಭಿಜ್ಞ, ಪುಟ–439.
[7] ಮಲೆಯೂರು ಗುರುಸ್ವಾಮಿ, ಸಿದ್ಧರಾಮೇಶ್ವರ ವಚನ ಸಂಪುಟ, ವಚನ–1714
[8] ಆರ್.ಸಿ.ಹಿರೇಮಠ, ಶ್ರೀಸಿದ್ಧರಾಮೇಶ್ವರರ ವಚನಗಳು, ವಚನ–299
[9] ಮಲೆಯೂರು ಗುರುಸ್ವಾಮಿ, ಸಿದ್ಧರಾಮೇಶ್ವರ ವಚನ ಸಂಪುಟ, ವಚನ–1148
[10] ಅದೇ, ವಚನ–544.
[11] ಅಭಿಜ್ಞ, ಪುಟ–439.
[12] ಮಲೆಯೂರು ಗುರುಸ್ವಾಮಿ, ಸಿದ್ಧರಾಮೇಶ್ವರ ವಚನ ಸಂಪುಟ, ವಚನ–992

ಮೇಲಿನ ವಚನದಲ್ಲಿ ಸಿದ್ಧರಾಮನು ಉಪಮೆ ಮೂಲಕ ಶರಣನಿಗೆ ಸ್ತ್ರೀಯರ ಜೊತೆಗಿನ ಸಂಬಂಧದಿಂದ ಯಾವುದೇ ಉಪಯೋಗವಿಲ್ಲ ಎಂದು ತಿಳಿಸುತ್ತಿದ್ದಾನೆ. ಅಂದರೆ ರತಿಸುಖದ ವಿರುದ್ಧ ಭಕ್ತನಿಗೆ ಎಚ್ಚರಿಕೆ ನೀಡುತ್ತಿದ್ದಾನೆ. ವೈವಾಹಿಕ ಸಂಬಂಧವನ್ನು ಭಕ್ತನು ಲಿಂಗದ ಜೊತೆಯಲ್ಲಿ ಅನುಭವಿಸಿದ ಮೇಲೆ ಉಳಿದ ಲೌಕಿಕ ಸಂಬಂಧಗಳು ತಮ್ಮ ಮಹತ್ವ ಕಳೆದುಕೊಂಡುಬಿಡುತ್ತವೆ. ಶಿವಶರಣನು ಸತಿಯಾಗಿ ಲಿಂಗಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಬಿಡುತ್ತಾನೆ. ಈ ಸಂಬಂಧದಲ್ಲಿ ಅತೃಪ್ತಿಗೆ ಅವಕಾಶವಿಲ್ಲ. ಏಕೆಂದರೆ ಪತಿಯ ಸ್ಥಾನದಲ್ಲಿರುವ ಲಿಂಗದ ಜೊತೆಗಿನ ಶರಣನ ಸಂಬಂಧವು ಪರಿಪೂರ್ಣ ಐಕ್ಯತೆಯಾಗಿದೆ. ಅಂದಮೇಲೆ ಇಲ್ಲಿ ಶರಣನು ಪ್ರಾಪಂಚಿಕ ಮೋಹಗಳನ್ನೆಲ್ಲಾ ಮೀರಿರುವುದರಿಂದ ಅಥವಾ ಆ ಸಂಬಂಧಗಳನ್ನೆಲ್ಲಾ ದೈವತ್ವಕ್ಕೇರಿಸಿರುವುದರಿಂದ ಪೂರ್ವಾಶ್ರಮದ ಸಂಬಂಧಗಳಿಗೆ ಯಾವುದೇ ಮಹತ್ವ ಉಳಿಯುವುದಿಲ್ಲ. “ಸಿದ್ಧರಾಮನ ವಚನಗಳಲ್ಲಿ ಸ್ತ್ರೀಯನ್ನೂ ಕುರಿತಾದ ವಿಶೇಷ ದೃಷ್ಟಿಕೋನವೊಂದು ಇಲ್ಲಿ ಸಿಗುತ್ತದೆ. ಯಾವ ವ್ಯಕ್ತಿ ಪೂರ್ಣವಾಗಿ ‘ಶರಣ ಸತಿ’ಯಾಗಿ ಪರಿವರ್ತನೆಯಾಗುತ್ತಾನೋ, ಆಗಷ್ಟೆ ಅವನಲ್ಲಿ ಸ್ತ್ರೀತ್ವ ಎಂಬುದು ಅಭಿವ್ಯಕ್ತಿ ಪಡೆಯಲಾರಂಭಿಸುತ್ತದೆ. ಇಲ್ಲಿ ಸ್ತ್ರೀ ಜೈವಿಕತನವನ್ನು ಕಳಚಿಕೊಂಡು ಹೊಸ ವ್ಯಾಖ್ಯೆಗೆ ಸಿಗುತ್ತಾಳೆ. ‘ಸ್ತ್ರೀತ್ವ’ ಎಂಬುದು ಶಾರೀರಿಕ ಸತ್ಯ ಮಾತ್ರವಾಗದೆ ದೊಡ್ಡ ಮೌಲ್ಯಗಳ ಜೊತೆ ಅನಿವಾರ್ಯ ನಂಟನ್ನು ಸಂಪಾದಿಸುತ್ತದೆ.”[13] ಈ ಬಗೆಯ ಭಕ್ತ ಮತ್ತು ಲಿಂಗದ ನಡುವಿನ ಸಂಯೋಗವನ್ನು ವಚನಕಾರರು ವೈವಾಹಿಕ ಸಂಬಂಧ ಪ್ರತಿಮೆ ಮೂಲಕ ವಿವರಿಸುತ್ತಿದ್ದಾರೆ. ಶರಣನು ಲಿಂಗದ ಜೊತೆ ವಿವಾಹವಾಗಿದ್ದಾನೆ ಎಂಬಂತೆ ಕಲ್ಪಿಸಿಕೊಳ್ಳಲಾಗಿದೆ. ಇಲ್ಲಿ ಲಿಂಗವೇ ಪತಿ, ಶರಣನೇ ಸತಿ.

ಸಿದ್ಧರಾಮನ ವಚನಗಳಲ್ಲಿ ಸ್ತ್ರೀಯನ್ನು ನೋಡುವ ದೃಷ್ಟಿ ಮೂರು ಬಗೆಯದಾಗಿದೆ: ಮೊದಲನೆಯದು ಹೆಣ್ಣನ್ನು ಹೊನ್ನು, ಮಣ್ಣಿನೊಂದಿಗೆ ನೋಡುವ ಸಾಂಪ್ರದಾಯಿಕ ನಿಲುವು. ಜೊತೆಗೆ ಸಿದ್ಧರಾಮನು ಸಾಂಪ್ರದಾಯಿಕ ನಿಲುವನ್ನು ಹೊಡೆದು ಕಟ್ಟಲು ಎರಡು ಆದರ್ಶದ ರೀತಿಗಳನ್ನು ಹುಡುಕಿಕೊಂಡಿದ್ದಾನೆ. ಸಹಜವಾಗಿ ಹೆಣ್ಣನ್ನು ಸ್ವೀಕರಿಸುವ ಕ್ರಮ ಒಂದಾದರೆ, ಇನ್ನೊಂದು ತಾನು ‘ಸತಿಯಾಗಿ’ ಒಪ್ಪಿಕೊಳ್ಳುವ ಮುಖಾಂತರ ‘ಸ್ತ್ರೀ’ತ್ವಕ್ಕೆ ಹೊಸ ಅರ್ಥ ನೀಡಿದ್ದಾನೆ. ಹನ್ನೆರಡನೇ ಶತಮಾನದ ವಚನಕಾರರು ಹೆಣ್ಣಿನ ಬಗ್ಗೆ ಅಭಿಮಾನದಿಂದ ಮಾತನಾಡುತ್ತಿರುವುದು ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ. ಹೆಣ್ಣಿನ ಬಗ್ಗೆ ಆಳವಾಗಿ ಬೇರೂರಿದ್ದ ಕೀಳು ಭಾವನೆಯನ್ನು ತೊಡೆದು ಹಾಕಲು ವಚನ ಚಳವಳಿಯು ಪ್ರಯತ್ನಿಸಿರುವುದು ತಿಳಿಯುತ್ತದೆ.

**ಪರಾಮರ್ಶನ ಗ್ರಂಥಗಳು**


1. ಮಲೆಯೂರು ಗುರುಸ್ವಾಮಿ, ಸಿದ್ಧರಾಮೇಶ್ವರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಆರ್.ಸಿ.ಹಿರೇಮಠ, ಶ್ರೀಸಿದ್ಧರಾಮೇಶ್ವರರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಓ.ಎಲ್.ನಾಗಭೂಷಣಸ್ವಾಮಿ, ವಚನ ಪ್ರಶ್ನೋತ್ತರ, ಚಿಂತನ ಚಿತ್ತಾರ, ರಾಮಕೃಷ್ಣನಗರ, ಮೈಸೂರು.
4. ಪಿ.ವಿ.ನಾರಾಯಣ, ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ.
5. ಎಚ್.ಜೆ.ಲಕ್ಕಪ್ಪಗೌಡ, ಅಭಿಜ್ಞ (ಸಾ.ಶಿ.ಮರುಳಯ್ಯ ಅಭಿನಂದನ ಗ್ರಂಥ), ಡಾ. ಸಾ.ಶಿ.ಮರುಳಯ್ಯ ಅಭಿನಂದನ ಸಮಿತಿ, ಬೆಂಗಳೂರು.


[13] ಅಭಿಜ್ಞ, ಪುಟ–441